ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 7- 13
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕಲ್ಯಾಣ ಕರ್ನಾಟಕ : ಪ್ರಾದೇಶಿಕ ಅಸಮತೋಲನದ ಮುಖಗಳು

**ಮಂಜುನಾಥ ಎಂ ಹೊಸಮನಿ***
*ಸಂಶೋಧಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ಭಾರತ ದೇಶವು ವಿಶ್ವದ ಪ್ರಮುಖ ಅಭಿವೃದ್ಧಶೀಲ ರಾಷ್ಟ್ರಗಳಲ್ಲಿ ಒಂದಾಗಿದೆ. ವಿಶ್ವದಲ್ಲಿ ವೇಗವಾಗಿ ಅಭಿವೃದ್ಧಿಯತ್ತ ಹೆಜ್ಜೆ ಇಡುತ್ತಿರುವ ಭಾರತ ದೇಶದ ವೇಗ ಒಂದೇ ತೆರನಾಗಿಲ್ಲ. ಬದಲಿಗೆ ಕೆಲ ಪ್ರದೇಶಗಳು ದೇಶದ ಸರಾಸರಿ ಅಭಿವೃದ್ಧಿ ವೇಗಕ್ಕಿಂತ ಹೆಚ್ಚಿದ್ದರೆ, ಇನ್ನೂ ಕೆಲವು ಪ್ರದೇಶಗಳ ಅತ್ಯಂತ ಕನಿಷ್ಠ ಮಟ್ಟದಲ್ಲಿವೆ. ಅಂತಹ ಪ್ರದೇಶಗಳಲ್ಲಿ ಕಲ್ಯಾಣ ಕರ್ನಾಟಕ ಒಂದಾಗಿದೆ. ಶಿಕ್ಷಣ, ಉದ್ಯೋಗ, ಆರೋಗ್ಯ, ರಾಜಕೀಯ ಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದಿರುವುದನ್ನು ಕಾಣಬಹುದಾಗಿದೆ.*

**Keywords:** *ಪ್ರಾದೇಶಿಕ ಅಸಮಾನತೆ, ಕಲ್ಯಾಣ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಡಾ.ಡಿ.ಎಂ ನಂಜುಂಡಪ್ಪ ವರದಿ.*

**ಪೀಠಿಕೆ**

ಭಾರತವು 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳನ್ನು ಹೊಂದಿರುವ ಅಭಿವೃದ್ಧಶೀಲ ರಾಷ್ಟ್ರವಾಗಿದ್ದು, ಮಹಾರಾಷ್ಟ್ರದ ಮರಾಠವಾಡ ಮತ್ತು ವಿದರ್ಭ, ಆಂಧ್ರ ಪ್ರದೇಶದ ತೆಲಂಗಾಣ, ಗುಜರಾತಿನ ಸೌರಾಷ್ಟ್ರ ಮತ್ತು ಕಚ್, ಕರ್ನಾಟಕದ ಹೈದರಾಬಾದ ಕರ್ನಾಟಕ ಪ್ರದೇಶಗಳು ಇಂದಿಗೂ ಹಿಂದುಳಿದಿರುವಿಕೆ ಸ್ಥಾನದಿಂದ ಹೊರಬರಲು ಸಾಧ್ಯವಾಗಿಲ್ಲ. ಈ ಭಾಗಗಳು ಹಿಂದುಳಿಯಲು ಪ್ರಾಕೃತಿಕ ಸಂಪತ್ತು, ದೂರದೃಷ್ಟಿ ಇಲ್ಲದ ಅರಸರ ಆಡಳಿತ ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಇನ್ನೂ ಮುಂತಾದವು ಕಾರಣಗಳಾಗಿವೆ. ಹೈದರಾಬಾದ್ ನಿಜಾಮನ ಆಡಳಿತದ ವೈಫಲ್ಯವೇ ತೆಲಂಗಾಣ, ಮಾರಾಠವಾಡ ಮತ್ತು ಹೈದರಾಬಾದ್ ಕರ್ನಾಟಕ ಹಿಂದುಳಿಯಲು ಕಾರಣವಾಗಿದೆ. ಮೈಸೂರು ಅರಸರು ಆಡಳಿತ ನಡೆಸಿದ ಪ್ರದೇಶವು ಅಭಿವೃದ್ಧಿಯಲ್ಲಿ ಉಚ್ಛ್ರಾಯ ಸ್ಥಿತಿಯತ್ತ ಸಾಗುತ್ತಿದ್ದರೆ, ಪಕ್ಕದ ಹೈದರಾಬಾದ್ ಸಂಸ್ಥಾನವು ನಿಜಾಮನ ಆಡಳಿತದ ಪರಿಣಾಮವಾಗಿ ಹಿಂದುಳಿಯುತ್ತಾ ಬಂದಿತು.

ಭಾರತದ ಸಂವಿಧಾನ ರಚನಾಸಭೆಯಲ್ಲಿ 371ನೇ ಅನುಚ್ಛೇದದಡಿಯಲ್ಲಿ ಯಾವ ಪ್ರದೇಶಗಳಿಗೆ ವಿಶೇಷ ಸ್ಥಾನಮಾನ ಕೊಡಬೇಕು ಎಂದು ಚರ್ಚಿಸುವ ಸಂದರ್ಭದಲ್ಲಿ ಈ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕೊಡಬೇಕು ಎಂದು ಚರ್ಚೆ ನಡೆದಿತು. ಆದರೆ ಇದರ ಪಕ್ಕದ ಮೈಸೂರು ಸಂಸ್ಥಾನವು ಉತ್ತಮ ಸ್ಥಿತಿಯಲ್ಲಿತ್ತು. ಈ ಕಾರಣದಿಂದಾಗಿ ಮೈಸೂರು ಸಂಸ್ಥಾನವೇ ಈ ಪ್ರದೇಶವನ್ನು ಅಭಿವೃದ್ಧಿಪಡಿಸುತ್ತಾರೆ ಎಂದು ವಿಶೇಷ ಸ್ಥಾನಮಾನ ಕೊಡಲಿಲ್ಲ. ಆದರೆ ಹೈದರಾಬಾದ್ ನಿಜಾಮ ಆಡಳಿತಕ್ಕೆ ಒಳಪಟ್ಟ ಮರಾಠವಾಡ ಮತ್ತು ತೆಲಂಗಾಣದಲ್ಲಿ ವಿಶೇಷ ಸ್ಥಾನಮಾನ ಮುಂದುವರೆಯಿತು. ಈ ವಿಶೇಷ ಸ್ಥಾನಮಾನದಿಂದ ವಂಚಿತವಾದ ಹೈದರಾಬಾದ್ ಕರ್ನಾಟಕ

***Please cite this article as:*** ಮಂಜುನಾಥ ಎಂ ಹೊಸಮನಿ. (2022). ಕಲ್ಯಾಣ ಕರ್ನಾಟಕ: ಪ್ರಾದೇಶಿಕ ಅಸಮತೋಲನದ ಮುಖಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 1(3), 7–13.

ಪ್ರದೇಶದಲ್ಲಿ ಪ್ರಾದೇಶಿಕ ಅಸಮಾನತೆ ಹೆಚ್ಚಾಯಿತು. 1953ರಲ್ಲಿ ರಚನೆಯಾದ ರಾಜ್ಯ ಪುನರ್ ರಚನಾ ಸಮಿತಿಯು ಹೈದರಾಬಾದ್ ಕರ್ನಾಟಕ ಪ್ರದೇಶವು ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ಈ ಪ್ರದೇಶದ ಅಭಿವೃದ್ಧಿಗೆ ಒಂದು ಪ್ರತ್ಯೇಕವಾದ ಅಭಿವೃದ್ಧಿ ಯೋಜನೆ ರೂಪಿಸಿ, ಪರಿಣಾಮಕಾರಿ ಅನುಷ್ಠಾನಕ್ಕೆ ತಂದು ಅಭಿವೃದ್ಧಿ ಪಡಿಸಬೇಕು ಎಂದು ಶಿಫಾರಸ್ಸು ಮಾಡಿದರೂ ಯಾವುದೇ ಯೋಜನೆ ರೂಪಿಸುವ ಆಸಕ್ತಿಯನ್ನು ಸರ್ಕಾರಗಳು ತೋರಿಸಲಿಲ್ಲ ಇದರಿಂದಾಗಿ ಈ ಪ್ರದೇಶ ಮತ್ತಷ್ಟು ಹಿಂದುಳಿಯಲು ಕಾರಣವಾಯಿತು.

ಈ ಭಾಗಕ್ಕೆ ವಿಶೇಷ ಸ್ಥಾನಮಾನಕ್ಕಾಗಿ ಜನಪರ ಹೋರಾಟಗಳು, ರಾಜ್ಯ ಸರ್ಕಾರದ ಮನವಿಗಳು ಮತ್ತು ಹಲವು ದಶಕಗಳ ಪ್ರಯತ್ನ ಫಲವಾಗಿ 371–(ಜೆ) ಅನುಚ್ಛೇದ ಜಾರಿಗೆ ಬಂದಿದೆ. ಜನಸಾಮಾನ್ಯರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ಎಷ್ಟರ ಮಟ್ಟಿಗೆ ಈ ವಿಶೇಷ ಸ್ಥಾನಮಾನವು ಕೆಲಸ ಮಾಡುತ್ತದೆ ಎಂದು ತಿಳಿಯಬೇಕಾಗಿದೆ. ಈ ವಿಶೇಷ ಸ್ಥಾನಮಾನದಿಂದ ರಚನೆಯಾದ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯು ಖರ್ಚು ಮಾಡುವ ಸಂದರ್ಭದಲ್ಲಿ ಶಿಕ್ಷಣಕ್ಕೆ ಶೇ.14 ಮತ್ತು ಆರೋಗ್ಯಕ್ಕೆ ಶೇ.3 ರಷ್ಟು ಮಾತ್ರ ಬಳಕೆ ಮಾಡುತಿದೆ. ಅಂದರೆ ಈ ಭಾಗದ ಅಭಿವೃದ್ಧಿ ಆಗಬೇಕಾದರೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಶೇ.50ಕ್ಕಿಂತ ಹೆಚ್ಚು ಅನುದಾನ ನೀಡುವ ಅವಶ್ಯಕತೆವಿದೆ.

**ಡಾ.ಡಿ.ಎಂ ನಂಜುಂಡಪ್ಪ ಉನ್ನತಾಧಿಕಾರ ಸಮಿತಿ.**

2000ರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಎಸ್.ಎಂ ಕೃಷ್ಣರವರ ನೇತೃತ್ವದ ಸರ್ಕಾರ ಕರ್ನಾಟಕ ರಾಜ್ಯದ ಹಿಂದುಳಿದಿರುವಿಕೆಯನ್ನು ಅಧ್ಯಯನ ಮಾಡಲು ನೇಮಿಸಿದ ಡಾ.ಡಿ.ಎಂ ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ಪ್ರಾದೇಶಿಕ ಅಸಮತೋಲನ ಕುರಿತು ಆಳವಾಗಿ ಅಧ್ಯಯನ ಮಾಡಿ, 2002ರಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ವರದಿಯಲ್ಲಿ ಕಲಬುರಗಿ ವಿಭಾಗವು ಅತ್ಯಂತ ಹಿಂದುಳಿದಿದೆ ಎಂಬ ಅಂಶವನ್ನು ಸ್ಪಷ್ಟವಾಗಿ ಒತ್ತಿ ಹೇಳಿತು.

**ಕೋಷ್ಟಕ 1: ಡಾ.ಡಿ.ಎಂ ನಂಜುಂಡಪ್ಪ ವರದಿಯನ್ವಯ ವಿಭಾಗವಾರು ಹಿಂದುಳಿದ ತಾಲೂಕುಗಳ ಸಂಖ್ಯೆ**

| ವಿಭಾಗದ ಹೆಸರು | ಸಾಪೇಕ್ಷ ಅಭಿವೃದ್ಧಿ ಹೊಂದಿದ ತಾಲೂಕುಗಳು | ಹಿಂದುಳಿದ ತಾಲೂಕುಗಳ ಸಂಖ್ಯೆ | ಅತಿ ಹಿಂದುಳಿದ ತಾಲೂಕುಗಳ ಸಂಖ್ಯೆ | ಅತ್ಯಂತ ಹಿಂದುಳಿದ ತಾಲೂಕುಗಳ ಸಂಖ್ಯೆ | ಒಟ್ಟು |
|---|---|---|---|---|---|
| ಬೆಂಗಳೂರು | 18 | 09 | 13 | 11 | 51 |
| ಮೈಸೂರು | 22 | 10 | 10 | 02 | 44 |
| ಬೆಳಗಾವಿ | 18 | 14 | 12 | 5 | 49 |
| ಕಲಬುರಗಿ | **03** | **02** | **05** | **21** | **31** |
| ಒಟ್ಟು | 61 | 35 | 40 | 39 | 175 |

**ಮೂಲ: ಹೆಚ್.ಪಿ.ಸಿ.ಎಫ್.ಆರ್.ಆರ್.ಐ.2002**

ಕೋಷ್ಟಕ 1 ರಲ್ಲಿ ತೋರಿಸಿರುವಂತೆ ರಾಜ್ಯದಲ್ಲಿ ಸಾಪೇಕ್ಷ ಅಭಿವೃದ್ಧಿ ತಾಲೂಕುಗಳ ಸಂಖ್ಯೆ 61 ಇದ್ದು, ಈ ತಾಲೂಕುಗಳಲ್ಲಿ ಕಲಬುರಗಿ ವಿಭಾಗದ ಕೇವಲ 3 ತಾಲೂಕುಗಳು ಮಾತ್ರ ಇವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಅತ್ಯಂತ ಹಿಂದುಳಿದ 39 ತಾಲೂಕುಗಳಲ್ಲಿ ಕಲಬುರಗಿ ವಿಭಾಗದಲ್ಲಿಯೇ 21 ತಾಲೂಕಗಳು ಕಂಡುಬರುತ್ತವೆ. ಅಂದರೆ ಈ ವಿಭಾಗವು ರಾಜ್ಯದಲ್ಲಿಯೇ ಅತ್ಯಂತ ಹಿಂದುಳಿದ

ಪ್ರದೇಶವಾಗಿದ್ದು, ಈ ಸಮಿತಿಯು 'ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಈ ಹೈದರಾಬಾದ್ ಕರ್ನಾಟಕ ಪ್ರದೇಶವು ನೂರು ವರ್ಷ ಹಿಂದುಳಿದಿದೆ' ಎಂದು ಹೇಳಿದೆ.

**ಡಾ. ಡಿ. ಎಂ ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯು ಹೈದ್ರಾಬಾದ್ ಕರ್ನಾಟಕಕ್ಕೆ ಸಂಬಂಧಿಸಿದಂತೆ ನೀಡಿದ ಶಿಫಾರಸ್ಸುಗಳು**

- ಸಾಮಾಜಿಕ ನ್ಯಾಯ ಹಾಗೂ ಸಮತೋಲನ ಬೆಳೆವಣಿಗೆಯನ್ನು ಅಭಿವೃದ್ಧಿಪಡಿಸಲು ಅಭಿವೃದ್ಧಿ ಸೌಲಭ್ಯಗಳನ್ನು ಸಮಾನವಾಗಿ ಹಂಚುವುದಕ್ಕಾಗಿ ರಾಜ್ಯ ಸರ್ಕಾರವು ಅಭಿವೃದ್ಧಿ ಯೋಜನೆ ರೂಪಿಸಿವುದು.
- ಯೋಜನೆ ರೂಪಿಸುವಾಗ ಪ್ರಸ್ತಾವನೆ ಪರಿಕಲ್ಪನೆ ಹಾಗೂ ಸುಧಾರಣೆಯ ದೃಷ್ಟಿಯಿಂದ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಲು ಗಮನ ಕೇಂದ್ರಿಕರಿಸುವುದು.
- ಹೈದ್ರಾಬಾದ್ ಕರ್ನಾಟಕದ ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಮಾಹಿತಿ ತಂತ್ರಜ್ಞಾನ, ಕೈಗಾರಿಕೆಗಳನ್ನು, ಖಾಸಗಿ ಮತ್ತು ಸಾರ್ವಜನಿಕ ವಲಯಗಳನ್ನು ಸ್ಥಾಪಿಸುವುದು.
- ಕೃಷಿ ಹಣಕಾಸು ಮತ್ತು ಅಭಿವೃದ್ಧಿ ಕಂಪನಿಯನ್ನು ಕಲಬುರಗಿ ಕೇಂದ್ರದಲ್ಲಿ ಸ್ಥಾಪಿಸುವುದು.
- ಹೈದ್ರಾಬಾದ್ ಕರ್ನಾಟಕದಲ್ಲಿರುವ ಖಾಸಗಿ ಶೈಕ್ಷಣಿಕ ಸಂಸ್ಥೆಗಳನ್ನು ಮುಚ್ಚದಂತೆ ನೋಡಿಕೊಳ್ಳವುದು.
- ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ಒಂದೊಂದು ವೈದ್ಯಕೀಯ ಸಂಸ್ಥೆಯನ್ನು ಸ್ಥಾಪಿಸುವುದು.
- ವಿವಿಧ ಸಾರ್ವಜನಿಕ ಉದ್ಯಮಗಳು ಮತ್ತು ನಿಗಮಗಳು, ಲೋಕಾಸೇವಾ ಆಯೋಗ, ರಾಜ್ಯ ಯೋಜನಾ ಮಂಡಳಿ, ವಿಶ್ವವಿದ್ಯಾಲಯ ಉಪಕುಲಪತಿಗಳು, ರಾಜ್ಯ ಸರ್ಕಾರ ರಚಿಸಿರುವ ಸಮಿತಿಗಳಲ್ಲಿ ಉತ್ತರ ಕರ್ನಾಟಕಕ್ಕೆ ಶೇ.50ರಷ್ಟು ಪ್ರಾತಿನಿಧ್ಯ ನೀಡಬೇಕು. ಹಾಗೆಯೇ ಸಚಿವ ಸಂಪುಟದಲ್ಲಿಯೂ ಈ ಭಾಗಕ್ಕೆ ಶೇ. 50ರಷ್ಟು ಪ್ರಾತಿನಿಧ್ಯ ನೀಡಬೇಕು.
- ವಿವಿಧ ಅಕಾಡೆಮಿಗಳ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿಯಲ್ಲಿ, ಕುಶಲ ಕರ್ಮಿಗಳಿಗೆ ಪ್ರಶಸ್ತಿ ನೀಡುವಲ್ಲಿ ಮತ್ತು ಮಾಸಿಕ ಗೌರವಧನ ನೀಡುವಲ್ಲಿ ಉತ್ತರ ಕರ್ನಾಟಕಕ್ಕೆ ಶೇ.50ರಷ್ಟು ಮೀಸಲಾತಿ ನೀಡಬೇಕು.
- ಗ್ರೂಪಿನ ಸಿ ಉದ್ಯೋಗದಲ್ಲಿ ಶೇ.80ರಷ್ಟು ಮೀಸಲಾತಿ ಮತ್ತು ಪ್ರತಿ ಜಿಲ್ಲೆಯಲ್ಲಿ ಸ್ಥಳೀಯರಿಗೆ ಡಿ. ಗ್ರೂಪಿನಲ್ಲಿ ಶೇ.100ರಷ್ಟು ಮೀಸಲಾತಿ ನೀಡಬೇಕು.
- ಈ ಪ್ರದೇಶವು ಅಭಿವೃದ್ಧಿ ಆಗಬೇಕಾದರೆ ಭಾರತದ ಸಂವಿಧಾನದ 371ನೇ ಅನುಚ್ಛೇದ ತಿದ್ದುಪಡಿ ತಂದು, ವಿಶೇಷ ಸ್ಥಾನಮಾನ ಕಲ್ಪಿಸಬೇಕು. ಇನ್ನೂ ಮುಂತಾದ ಶಿಫಾರಸ್ಸುಗಳನ್ನು ಮಾಡಿತ್ತು. ಆದರೆ ರಾಜ್ಯ ಸರ್ಕಾರ ಈ ಶಿಫಾರಸ್ಸುಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡದೇ ಇರುವುದರಿಂದ ಹೈದ್ರಾಬಾದ್ ಕರ್ನಾಕಟವು ಪ್ರಾದೇಶಿಕ ಅಸಮಾನತೆಯಿಂದ ಹೊರಬಂದಿಲ್ಲ.

**ಕೋಷ್ಟಕ.2: ಕರ್ನಾಟಕದಲ್ಲಿ ವಿಭಾಗವಾರು ಸಾಕ್ಷರತಾ ಪ್ರಮಾಣ. 2001 ಮತ್ತು 2011 ಸಾಕ್ಷರತೆ**

| ವಿಭಾಗಗಳು | ಒಟ್ಟು ಸಾಕ್ಷರತೆ | | ಪುರುಷರ ಸಾಕ್ಷರತೆ | | ಮಹಿಳೆಯರ ಸಾಕ್ಷರತೆ | |
|---|---|---|---|---|---|---|
| | **2001** | **2011** | **2001** | **2011** | **2001** | **2011** |
| ಬೆಂಗಳೂರು | 72.37 | 80.21 | 80.30 | 87.09 | 63.98 | 73.85 |
| ಮೈಸೂರು | 68.92 | 76.50 | 76.62 | 82.69 | 61.31 | 70.39 |
| ಬೆಳಗಾವಿ | 65.14 | 74.69 | 76.37 | 83.22 | 53.48 | 65.92 |
| **ಕಲಬುರಗಿ** | **53.64** | **64.92** | **65.87** | **74.89** | **41.07** | **54.76** |
| ಕರ್ನಾಟಕ | 66.64 | 75.36 | 76.10 | 82.86 | 56.87 | 67.87 |

**ಮೂಲ: 2011ರ ಭಾರತ ಸರ್ಕಾರದ ಜನಗಣತಿ.**

**ಕೋಷ್ಟಕ 3: 2011 ಹೈದರಾಬಾದ್ ಕರ್ನಾಟಕ ಜಿಲ್ಲೆಗಳ ಸಾಕ್ಷರತೆ**

| **ಕ್ರ.ಸಂ** | **ಜಿಲ್ಲೆಯ ಹೆಸರು** | **ಸಾಕ್ಷರತೆ ಪ್ರಮಾಣ** |
|---|---|---|
| 1 | ಬೀದರ್ | 70.51 |
| 2 | ಕೊಪ್ಪಳ | 68.09 |
| 3 | ಬಳ್ಳಾರಿ | 67.43 |
| 4 | ಕಲಬುರಗಿ | 64.85 |
| 5 | ರಾಯಚೂರು | 59.56 |
| 6 | ಯಾದಗಿರಿ | 51.83 |

**ಮೂಲ: 2011ರ ಭಾರತ ಸರ್ಕಾರದ ಜನಗಣತಿ.**

ಕೋಠಾರಿ ಆಯೋಗವು (1964–66) **"ಭಾರತದ ಭವಿಷತ್ವ ತರಗತಿಯ ಕೊಠಡಿಯಲ್ಲಡಗಿದೆ"** ಎಂದು ಹೇಳಿದೆ. ಡಾ.ಬಿ.ಆರ್ ಅಂಬೇಡ್ಕರ್‌ರವರು "ಶಿಕ್ಷಣದಿಂದ ಮಾತ್ರ ಮನುಷ್ಯ ಅಭಿವೃದ್ಧಿ ಸಾಧ್ಯ" ಎಂದು ಶಿಕ್ಷಣದ ಮಹತ್ವ ಕುರಿತು ಹೇಳಿದ್ದಾರೆ. ಅಂದರೆ ಒಂದು ಪ್ರದೇಶದ ಅಭಿವೃದ್ಧಿಯು ಆ ಪ್ರದೇಶದ ಶಿಕ್ಷಣದ ಗುಣಮಟ್ಟದಲ್ಲಡಗಿದೆ. ಹೈದ್ರಾಬಾದ್ ಕರ್ನಾಟಕದ ಸಾಕ್ಷರತೆಯು ಕೆಳಮಟ್ಟದಲ್ಲಿರುವುದರಿಂದ ಈ ಭಾಗದ ಎಲ್ಲಾ ಕ್ಷೇತ್ರದ ಅಭಿವೃದ್ಧಿಯು ಕೆಳಮಟ್ಟದಲ್ಲಿದೆ.

ಕೋಷ್ಟಕ 2ರಲ್ಲಿ ವಿಭಾಗವಾರು ಸಾಕ್ಷರತ ಪ್ರಮಾಣವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಹೈದ್ರಾಬಾದ್ ಕರ್ನಾಟಕದ ಕಲಬುರಗಿ ವಿಭಾಗದಲ್ಲಿ ತೀರಾ ಕಡಿಮೆ ಇರುವುದು ಕಂಡುಬರುತ್ತದೆ. 2011ರ ಭಾರತದ ಜನಗಣತಿಯಲ್ಲಿ ಭಾರತದ ಸಾಕ್ಷರತೆ 74.04 ಇದೆ. ಕರ್ನಾಟಕದ ಸಾಕ್ಷರತೆ 75.36 ರಷ್ಟಿದೆ. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಕ್ಷರತೆ ಶೇ.64.45 ಇದೆ. ಅಂದರೆ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ದೇಶದ ಮತ್ತು ರಾಜ್ಯದ ಸರಾಸರಿ ಸಾಕ್ಷರತೆ ಮಟ್ಟಕ್ಕಿಂತ ಕಡಿಮೆಯಿದೆ. ಕರ್ನಾಟಕದ ಕಡಿಮೆ ಸಾಕ್ಷರತೆ ಹೊಂದಿದೆ ಜಿಲ್ಲೆಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಯಾದಗಿರಿ ಮತ್ತು ರಾಯಚೂರು ಸೇರಿವೆ. ಯಾದಗಿರಿಯ ಜಿಲ್ಲೆಯ ಮಹಿಳೆಯ ಸಾಕ್ಷರತೆ 41.31 ರಷ್ಟಿದೆ. ಕರ್ನಾಟಕದ ಸಾಕ್ಷರತೆಗಿಂತ ಶೇ.34.05 ರಷ್ಟು ಕಡಿಮೆಯಿದೆ. ಈ ಪ್ರದೇಶದಲ್ಲಿ ಕಡಿಮೆ ಸಾಕ್ಷರತೆ ಇದೆ ಎನ್ನುವುದು ಸ್ಪಷ್ಟವಾಗಿದೆ. ಸಾಕ್ಷರತೆ ಕಡಿಮೆ ಇರುವುದರಿಂದ ಜನರಲ್ಲಿ ಜಾಗೃತಿ,

ಆಧುನಿಕತೆ ಇಲ್ಲದೇ ಇರುವುದರಿಂದ ಈ ಭಾಗವು ಹಿಂದುಳಿಯಲು ಕಾರಣವಾಗಿದೆ, ಈ ಕಾರಣದಿಂದಾಗಿ ಪ್ರಾದೇಶಿಕ ಅಸಮಾನತೆ ಹೆಚ್ಚಾಗಿದೆ ಎಂದು ಹೇಳಬಹುದು.

**ಕೋಷ್ಟಕ 4: ಹೆಚ್ಚು ಜನಸಂಖ್ಯೆ ದರ ಹೊಂದಿರುವ ಕರ್ನಾಟಕದ ಜಿಲ್ಲೆಗಳು**

| ಕ್ರ.ಸಂ | ಜಿಲ್ಲೆಯ ಹೆಸರು | ಜನಸಂಖ್ಯಾ ದರ |
|---|---|---|
| 1 | ಬೆಂಗಳೂರು | 47.18 |
| 2 | ಯಾದಗಿರಿ | 22.81 |
| 3 | ಬಳ್ಳಾರಿ | 20.99 |
| 4 | ಬಿಜಾಪುರ | 20.50 |
| 5 | ಕಲಬುರಗಿ | 18.01 |

**ಮೂಲ: 2011ರ ಭಾರತ ಸರ್ಕಾರದ ಜನಗಣತಿ.**

**ಕೋಷ್ಟಕ 5: ಹೆಚ್ಚು ಸಾಕ್ಷರತೆ ಹೊಂದಿರುವ ಕರ್ನಾಟಕದ ಜಿಲ್ಲೆಗಳು**

| ಕ್ರ.ಸಂ | ಜಿಲ್ಲೆಯ ಹೆಸರು | ಜನಸಂಖ್ಯಾ ದರ |
|---|---|---|
| 1 | ದಕ್ಷಿಣ ಕನ್ನಡ | 88.57 |
| 2 | ಬೆಂಗಳೂರು | 87.67 |
| 3 | ಉಡುಪಿ | 86.24 |
| 4 | ಉತ್ತರ ಕನ್ನಡ | 84.06 |
| 5 | ಕೊಡಗು | 82.61 |

**ಮೂಲ: 2011ರ ಭಾರತ ಸರ್ಕಾರದ ಜನಗಣತಿ.**

ಕೋಷ್ಠಕ 4 ಮತ್ತು 5ನ್ನು ಅವಲೋಕಿಸಿದಾಗ ಕರ್ನಾಟಕದ ಜನಸಂಖ್ಯೆ ಹೆಚ್ಚಿನ ದರದ ಐದು ಜಿಲ್ಲೆಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಮೂರು ಜಿಲ್ಲೆಗಳಾದ ಯಾದಗಿರಿ, ಬಳ್ಳಾರಿ, ಕಲಬುರಗಿ ಸ್ಥಾನ ಪಡಿದಿವೆ. ಆದರೆ ಕರ್ನಾಟಕದ ಹಚ್ಚಿನ ಸಾಕ್ಷರತೆ ಹೊಂದಿರುವ ಐದು ಜಿಲ್ಲೆಗಳಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳು ಯಾವುದೇ ಸ್ಥಾನ ಪಡಿದಿಲ್ಲ ಎಂಬ ಮಾಹಿತಿಯು ಸ್ಪಷ್ಟವಾಗುತ್ತದೆ. ಸಾಕ್ಷರತೆಯಲ್ಲಿ ಕೊನೆಯ ಸ್ಥಾನದಲ್ಲಿರುವ ಯಾದಗಿರಿ ಜಿಲ್ಲೆಯು ಜನಸಂಖ್ಯೆಯ ಬೆಳವಣಿಗೆಯ ದರದಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಅಂದರೆ ಈ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳು ಜನಸಂಖ್ಯೆಯ ದರದಲ್ಲಿ ಮುಂದಿವೆ, ಆದರೆ ಸಾಕ್ಷರತೆಯಲ್ಲಿ ಕೊನೆಯ ಸ್ಥಾನದಲ್ಲಿವೆ.

**ಕೋಷ್ಠಕ.06: ಕರ್ನಾಟಕ ರಾಜ್ಯದಲ್ಲಿ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಶೇಕಡಾವಾರು**

| ವಿಭಾಗಗಳು | ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಶೇಕಡಾವಾರು |
|---|---|
| ಬೆಂಗಳೂರು | 0.25 |
| ಮೈಸೂರು | 0.08 |
| ಬೆಳಗಾವಿ | 0.37 |
| ಕಲಬುರಗಿ | 1.48 |

**ಮೂಲ: ವಿಜಯ ಕರ್ನಾಟಕ ದಿನಪತ್ರಿಕೆ. (2020, ಜನವರಿ 20)**

ಆರೋಗ್ಯವಂತ ಮಾನವ ಸಂಪನ್ಮೂಲವು ದೇಶದ  ಅಭಿವೃದ್ಧಿಗೆ ಬುನಾದಿಯಾಗಿದೆ. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶವು ಮಕ್ಕಳ ಮತ್ತು ಮಹಿಳೆಯರಲ್ಲಿನ ಅಪೌಷ್ಟಿಕತೆ ಕೊರತೆ, ಅಸುರಕ್ಷತೆ ಹೆರಿಗೆಗಳು,  ಆಸ್ಪತ್ರೆಗಳ ಕೊರತೆ, ವೈದ್ಯರ ಕೊರತೆಯಂತಹ ಸಮಸ್ಯೆಗಳಿಂದ ಬಳಲುತ್ತಿದೆ. ರಾಜ್ಯ ಸರ್ಕಾರದ ಯೋಜನಾ ಇಲಾಖೆಯ ವರದಿಯಂತೆ ಉಡುಪಿ ಜಿಲ್ಲೆಯಲ್ಲಿರುವ ಪ್ರಾಥಮಿಕ ಕೇಂದ್ರಗಳ ಸಂಖ್ಯೆ, ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕಿಂತ ಹೆಚ್ಚಿದೆ. ಕರ್ನಾಟಕ ರಾಜ್ಯದಲ್ಲಿ ನಡೆಸಿದ ಮಾನವನ ಆರೋಗ್ಯದ ಸಮೀಕ್ಷೆಗಳು  ಈ ಹೈದರಾಬಾದ್ ಕರ್ನಾಟಕ ಭಾಗದ ಜನರು ಅಪೌಷ್ಟಿಕತೆ ಬಳಲುತ್ತಿದ್ದಾರೆ ಎಂಬ ವಿಚಾರ ಪ್ರಸ್ತಾಪವಾಗಿದೆ.

ಭಾರತ ಸೇರಿದಂತೆ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಿದೆ. ಆದರೆ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅದಕ್ಕಿಂತಲೂ ಅತಿಹೆಚ್ಚು ನಿರುದ್ಯೋಗ ಇರುವುದನ್ನು ಕಾಣಬಹುದಾಗಿದೆ.  ಕೆಲಸವೆಂದರೆ ಸರ್ಕಾರಿ ಉದ್ಯೋಗ ಎನ್ನುವಂತೆ ಬಾಸವಾಗುತ್ತದೆ. ಆದರೆ ಈ ಕಲ್ಯಾಣ ಕರ್ನಾಟಕದಲ್ಲಿ ಸರ್ಕಾರಿ ಉದ್ಯೋಗವೆಂಬುವುದು ಕನಸಿನ ಮಾತಾಗಿತ್ತು. ಈ ಮೇಲಿನ ಕೋಷ್ಟಕದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ವಿವಿಧ ನೇಮಕಾತಿಗಳಲ್ಲಿ ಕರ್ನಾಟಕದ ಬೇರೆ ಜಿಲ್ಲೆಯವರೆ ಈ ಭಾಗದಲ್ಲಿ ನೇಮಕಾತಿ ಹೊಂದುವುದು ಸಾಮಾನ್ಯವಾಗಿತ್ತು. ಆದರೆ ಈ 371(ಜೆ) ಅನುಚ್ಛೇದ ಜಾರಿಯಾದ ನಂತರ ನೇಮಕಾತಿಯಲ್ಲಿ ಈ ಹೈದ್ರಾಬಾದ್ ಕರ್ನಾಟಕ ಭಾಗದವರು ನೇಮಕಾತಿ ಹೊಂದುವ ಅವಕಾಶ ಪಡಿದುಕೊಂಡರು. ಆದರೆ ಈ ಹಿಂದೆ ಆರು ದಶಕದ ನೇಮಕಾತಿಗಳಲ್ಲಿ ಈ ಅವಕಾಶ ಪಡೆಯುವಲ್ಲಿ ವಿಫಲರಾಗಿ, ಈ ಭಾಗದಲ್ಲಿ ನಿರುದ್ಯೋಗ ಹೆಚ್ಚಾಗಲು ಕಾರಣವಾಗಿದೆ.

**ತಲಾದಾಯ**

ರಾಜ್ಯದ ವಿಭಾಗವಾರು ತಲಾದಾಯವನ್ನು ಗಮನಿಸಿದಾಗ ಬೆಂಗಳೂರು ವಿಭಾಗವು 2.30422ರೂ.ಗಳನ್ನು ತಲಾದಾಯ ಹೊಂದಿದ್ದರೆ, ಮೈಸೂರು ವಿಭಾಗವು 1.63855 ರೂ.ಗಳನ್ನು ಬೆಳಗಾವಿ ವಿಭಾಗ 1.06.049 ರೂ.ಗಳನ್ನು ಹಾಗೂ ಕಲಬುರಗಿ ವಿಭಾಗ 95.887 ರೂ.ಗಳನ್ನು ತಲಾದಾಯ ಹೊಂದಿರುವುದನ್ನು ಕರ್ನಾಟಕ ಆರ್ಥಿಕ ಸಮೀಕ್ಷೆ 2018–19ರ ಅಂಕಿಅಂಶಗಳಲ್ಲಿ ಕಾಣಬಹುದಾಗಿದೆ. ದಕ್ಷಿಣ ಕರ್ನಾಟಕದ ಜಿಲ್ಲೆಗಳಾದ ಬೆಂಗಳೂರು ನಗರ ಜಿಲ್ಲೆಯು ರಾಜ್ಯದಲ್ಲಿ ಅತಿ ಹೆಚ್ಚು ತಲಾದಾಯ ಹೊಂದಿದ ಜಿಲ್ಲೆಯಾಗಿದೆ. ಆದರೆ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಯಾದ ಕಲಬುರಗಿಯು ಅತ್ಯಂತ ಕಡಿಮೆ ತಲಾದಾಯ ಹೊಂದಿದ ಜಿಲ್ಲೆಯಾಗಿದೆ. ಇದನ್ನು ಗಮನಿಸಿದಾಗ ರಾಜ್ಯದ  ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ ಮುಂದುವರೆದಿರುವುದು ಕಂಡುಬರುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶವು ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಗೆ ಹೋಲಿಸಿದಾಗ  ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿದ್ದು, ಸ್ವಾತಂತ್ರ್ಯ ಬಂದು ಏಳು ದಶಕ ಕಳೆದರೂ ರಸ್ತೆ ಕಾಣದೇ ಇರುವ ಊರುಗಳನ್ನು ಕಾಣಬಹುದಾಗಿದೆ. ಕೃಷಿ ಕೂಲಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಇಡೀ ರಾಜ್ಯದಲ್ಲಿಯೇ  ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹೆಚ್ಚಿದೆ. ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ ಹೈದರಾಬಾದ್ ಕರ್ನಾಟಕ ಪ್ರದೇಶವು ಆರ್ಥಿಕವಾಗಿ, ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿದೆ ಎಂಬುದನ್ನು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

**ಪರಾಮರ್ಶನಾ ಗ್ರಂಥಗಳು**


- ಚಂದ್ರಶೇಖರ ಟಿ.ಆರ್. (2016). ಕರ್ನಾಟಕ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ಮತ್ತು ಸಂವಿಧಾನ ಅನುಚ್ಛೇದ 371(ಜೆ). ಇಲ್ಲಿ ಅಮರೇಶ ನುಗಡೋಣಿ (ಸಂ.) ಕಲ್ಯಾಣ ಕರ್ನಾಟಕ. ಕನ್ನಡ ಸಾಹಿತ್ಯ ಪರಿಷತ್.
- ಚಂದ್ರಶೇಖರ ಟಿ.ಆರ್. (2013). ಜನಗಣತಿ: 2011 ಕರ್ನಾಟಕ ಪ್ರಾದೇಶಿಕ ಮಾಹಿತಿಕೋಶ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ಡಾ. ಡಿ. ಎಂ ನಂಜುಂಡಪ್ಪ ಉನ್ನತಾಧಿಕಾರ ಸಮಿತಿ ವರದಿ. (2002). ಕರ್ನಾಟಕ ಸರ್ಕಾರ.
- ಗಣೇಶ ಚಂದನ ಶಿವ. (2021, ಸೆಪ್ಟೆಂಬರ್ 24). ಕಣ್ಣಿಗೆ ಕಾಣದ ಕಲ್ಯಾಣ. ಪ್ರಜಾವಾಣಿ ದಿನ ಪತ್ರಿಕೆ. ಪು.8
- ಕಾವಲಯ್ಯ ಸಿ. (2020). ಹೈದರಾಬಾದ್ ಕರ್ನಾಟಕ ಸಂವಿಧಾನಾತ್ಮಕ ವಿಶೇಷ ಸ್ಥಾನಮಾನ–ಒಂದು ವಿಮರ್ಶಾತ್ಮಕ ಅಧ್ಯಯನ. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ.
- ರಝಾಕ ಉಸ್ತಾದ. (2011). ಹೈದರಾಬಾದ್ ಕರ್ನಾಟಕ ಕಥೆ–ವ್ಯಥೆ, ಕರ್ನಾಟಕ ಸಾಹಿತ್ಯ ಪರಿಷತ್ತು.
- ಸದಾನಂದ ಜೆ.ಎಸ್ ಮತ್ತು ಆರ್.ಜೆ ಚಿದಾನಂದ. (2005). ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾತೋಲನ ಮತ್ತು ಪ್ರದೇಶಾಭಿವೃದ್ಧಿ ಮಂಡಳಿಗಳು. ಇಲ್ಲಿ ಶ್ರೀಧರ ಎ. ಮತ್ತು ಸಿದ್ಧಗಂಗಮ್ಮ (ಸಂ.) (2005) ಅಭಿವೃದ್ಧಿ ಅಧ್ಯಯನ–ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ವಿಜಯ ಕರ್ನಾಟಕ ದಿನ ಪತ್ರಿಕೆ. (2020 ಜನವರಿ 29). ಅಪೌಷ್ಟಿಕತೆ ತಡೆ ಅಷ್ಟಕ್ಕಷ್ಟೇ.